



# ವೇಷಾಂತರ ಕೀಟ..!



ಸಸ್ಯ ಲೋಕದಲ್ಲೂ ಸಹಜೀವನವಿದೆ. ಪಾಚಿ ಮತ್ತು ಬೂಸ್ಟ್ ಕೂಡು ಜೀವನ ನಡೆಸುತ್ತವೆ. ಹಸಿರಾಗಿರುವ ಪಾಚಿ ದ್ಯುತಿಸಂಶ್ಲೇಷಣ ಕ್ರಿಯೆಯಿಂದ ಆಹಾರ ತಯಾರಿಸುತ್ತದೆ. ಇದಕ್ಕೆ ಬೇಕಾದ ನೀರನ್ನು ಬೂಸ್ಟ್ ತನ್ನ ಬೇರಿನ ವ್ಯೂಹದಿಂದ ಒದಗಿಸುತ್ತದೆ. ಬೂಸ್ಟ್ ಪತ್ರ ಹರಿತ್ತು ಇಲ್ಲದ್ದರಿಂದ ಆಹಾರ ತಯಾರಿಸುವುದು ಸಾಧ್ಯವಾಗುವುದಿಲ್ಲ. ಪಾಚಿ ಪತ್ರ ಹರಿತ್ತು ನೆರವಿನಿಂದ ತಯಾರಿಸಿದ ಆಹಾರವನ್ನು ಎರಡೂ ಸೇವಿಸುತ್ತವೆ. ಇಂಥ ಸಹ ಜೀವನ ಶಿಲಾವಲ್ಕಗಳಲ್ಲಿ ಕಂಡುಬರುತ್ತದೆ. ಇವಕ್ಕೆ ಕಲ್ಲು ಹೂವುಗಳೆಂದೂ ಕರೆಯುವರು.

ಇಂಥ ಶಿಲಾವಲ್ಕಗಳನ್ನು ಹೋಲುವ ಕೀಟವೊಂದಿದೆ. ಇದು ಆರ್ಥೋಪೋಡ ವರ್ಗದ ಟೆಟ್ಟಿಗೊನಿಡೇ ಕುಟುಂಬಕ್ಕೆ ಸೇರಿದೆ. ಇದರ ಜಾತಿಯ ಹೆಸರು ಮಾರ್ಕಿಯ. ವೈಜ್ಞಾನಿಕ ಹೆಸರು ಮಾರ್ಕಿಯ ಹಿಸ್ಟ್ರಿಕ್ಸ್ ಎಂದಿದೆ. ಇದು ಮಧ್ಯ ಮತ್ತು ದಕ್ಷಿಣ ಅಮೆರಿಕಗಳಲ್ಲಿ ಕಂಡುಬರುತ್ತದೆ.

ವಿಶೇಷವೆಂದರೆ ಇವು ಸಸ್ಯಹಾರಿಗಳಾಗಿದ್ದೂ ಅರಣ್ಯ ವಾಸಿಗಳು. ಉದ್ದವಾದ ಕುಡಿ ಮೀಸೆಗಳಿವೆ. ಪಾದದಲ್ಲಿ 4 ಕಣ್ಣುಗಳಿವೆ. ಇವು ವೈರಿಗಳಿಂದ ಪಾರಾಗಲು ಕಪಟ ವೇಷ ಧರಿಸುತ್ತವೆ. ಶಿಲಾವಲ್ಕದಂತೆ ಮರದ ಬೊಡ್ಡೆಯ ಬಣ್ಣವಿರುವುದರಿದ ವೈರಿಗಳು ಗುರುತಿಸಲಾರವು. ಹೀಗಾಗಿ ಸುಲಭವಾಗಿ ವೈರಿಗಳಿಂದ ಬಚಾವಾಗುತ್ತವೆ. ಎಂಥ ವೇಷಾಂತರ ಅಲ್ಲವೇ?

■ ಪ್ರಕಾಶ ಎಸ್.ಮನ್ನಂಗಿ

